ಪ್ರದೇಶವಿರಬಹುದು, ಗ್ರಾಮೀಣ ಪ್ರದೇಶವಿರಬಹುದು. ಎಲ್ಲೆಲ್ಲಿ ಈ ಆಶ್ರಯ ಕಾಲೋನಿಗಳು ಏನಿವೆ ಅಲ್ಲಿ ವಿದ್ಯುತ್ತೀಕರಣ ಮಾಡುವ ಬಗ್ಗೆ ಒಂದು ನಿರ್ಣಯ ಮಾಡಿದ್ದೇವೆ. ಉಳಿಕೆಯಾಗಿರುವ ಹಣದಲ್ಲಿ 2000-2003ನೇ ಸಾಲಿನಲ್ಲಿ ಅಂದರೆ ಈ ವರ್ಷದಲ್ಲಿ ಆಶ್ರಯ ಕಾಲೋನಿಗಳು ಬರುವಂತಹ ಜಾಗಳಲ್ಲಿ ವಿದ್ಯುತ್ತೀಕರಣ ಮಾಡುವುದರ ಬಗ್ಗೆ ಸರ್ಕಾರದ ಒಂದು ನಿರ್ಣಯ ಮಾಡಿದೆಯೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರುಗಳ ಗಮನಕ್ಕೆ ತರುತ್ತಿದ್ದೇನೆ. ತಾವು ಈಗಾಗಲೇ ಅಪ್ಪಣೆ ಕೊಟ್ಟ ಪ್ರಕಾರ ಅರ್ಧಗಂಟೆಗಳ ಕಾಲ ಇದರ ಬಗ್ಗೆ ಚರ್ಚೆಮಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ಈ ಬಗ್ಗೆ ದೀರ್ಘವಾಗಿ ಚರ್ಚೆಯಾಗಲಿಯೆಂದು ಹೇಳುತ್ತೇನೆ. ಕೊನೆಯದಾಗಿ ಮಾನ್ಯ ಸದಸ್ಯರಾದ ಶ್ರೀ ದಿನೇಶ್ ಗುಂಡೂರಾವ್ ಅವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ವಾರ್ಷಿಕ ಆದಾಯಮಿತಿ ಫಲಾನುಭವಿಗಳಿಗೆ 15800 ರೂಪಾಯಿ ಇದೆ. ಇದನ್ನು ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಹೆಚ್ಚಿಸುವಂಥ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. ಸರ್ಕಾರ ಇದರ ಬಗ್ಗೆ ಪರಿಶೀಲಿಸುತ್ತದೆ.

ಚಿಂಚೋಳಿ ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

167 (1574) ಶ್ರೀ ಕೈಲಾಸನಾಥ ಪಾಟೀಲ್ (ಚಿಂಚೋಳಿ) - ಪ್ರೊ ।। ಬಿ.ಕೆ. ಚಂದ್ರಶೇಖರ್, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂಚೋಳಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಮತ್ತು ಶಿಕ್ಷಕೇತರ ಹುದ್ದೆಗಳೆಷ್ಟು;

ಆ) ಅವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; ಖಾಲಿ ಇದ್ದಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳಲು ಪರ್ಯಾಯ ವ್ಯವಸ್ಥೆ ಏನು; (ವಿಶೇಷವಾಗಿ ಪ್ರೌಢಶಾಲೆಯಲ್ಲಿ ಗಣಿತ ವಿಜ್ಞಾನ, ಇಂಗ್ಲೀಷ್ ವಿಷಯಗಳಿಗೆ)

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) 1) ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು - 979

2) ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು - 171

3) ಬೋಧಕೇತರ ಹುದ್ದೆಗಳು - 22

ಒಟ್ಟು - 1172

ಆ) ಖಾಲಿ ಇರುವ ಹುದ್ದೆಗಳ ವಿವರ ಹೀಗಿದೆ :

1) ಪ್ರಾಥಮಿಕ ಶಾಲೆ .. 258

2) ಪ್ರೌಢಶಾಲೆ .. 52

3) ಬೋಧಕೇತರ .. 05

ಸಮೀಪದ ಶಾಲೆಯಿಂದ ತಾತ್ಕಾಲಿಕವಾಗಿ ವಾರದಲ್ಲಿ ಮೂರು ದಿನಗಳ ಕಾಲ ನಿಯೋಜಿಸಿ ಪಾಠ ಬೋಧನೆ ಮಾಡುವಂತೆ ವ್ಯವಸ್ಥೆ ಮಾಡಲಾಗಿದೆ. ಶಿಕ್ಷಕರ ನೇಮಕಾತಿಯನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ಶ್ರೀ ಕೈಲಾಸನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಇರತಕ್ಕಂಥ ಈ ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ ಸುಮಾರು 258 ಹುದ್ದೆಗಳು ಖಾಲಿ ಇವೆ ಎನ್ನತಕ್ಕಂಥ ವಿಚಾರವನ್ನು ಮಾನ್ಯ ಸಚಿವರು ಹೇಳಿದ್ದಾರೆ. ಇದೇ ರೀತಿ ಪ್ರೌಢಶಾಲೆಗಳಲ್ಲಿ ಕೂಡ 52 ಹುದ್ದೆಗಳು ಖಾಲಿ ಇವೆ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ನಾನು ಮೊನ್ನೆ ಶನಿವಾರ ದಿವಸ ನನ್ನ ಕ್ಷೇತ್ರಕ್ಕೆ ಹೋಗಿದ್ದಾಗ ನನಗೆ ತಿಳಿದು ಬಂದ ಮಾಹಿತಿ ಪ್ರಕಾರ ಈ ಪ್ರೌಢಶಾಲೆಗಳಲ್ಲಿ ಕೂಡ 52 ಹುದ್ದೆಗಳು ಖಾಲಿ ಇವೆ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ನಾನು ಮೊನ್ನೆ ಶನಿವಾರ ದಿವಸ ನನ್ನ ಕ್ಷೇತ್ರಕ್ಕೆ ಹೋಗಿದ್ದಾಗ ನನಗೆ ತಿಳಿದು ಬಂದ ಮಾಹಿತಿ ಪ್ರಕಾರ ಈ ಪ್ರೌಢಶಾಲೆಗಳಲ್ಲಿ 71 ಹುದ್ದೆಗಳು ಖಾಲಿ ಇರುತ್ತವೆ. ಈ ಹುದ್ದೆಗಳು ಎರಡು ವರ್ಷದಿಂದಲೂ ಭರ್ತಿಯಾಗದೆ ಉಳಿಯುತ್ತಿವೆ. ನಮ್ಮ ಹೈದರಾಬಾದ್ ಕರ್ನಾಟಕ ಮೊದಲೇ ಹಿಂದುಳಿದ ಪ್ರದೇಶ ಎನ್ನುವಂಥ ಮಾತು ಎಲ್ಲರಿಗೂ ತಿಳಿದಿರುವ ವಿಷಯ. ಈ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಬಹಳಷ್ಟು ಗೊಂದಲ ಇದೆ ಮತ್ತು ಬಹಳ ತಡವಾಗುತ್ತಿದೆ. ಇದಕ್ಕೆ ಕೋರ್ಟು ಕೇಸು ಯಾವುದೇ ಇರಲಿ, ಈ ಶಾಲಾ ಶಿಕ್ಷಕರ ನೇಮಕಾತಿ ಸರಿಯಾದ ಸಮಯದಲ್ಲಿ ಆಗುತ್ತಿಲ್ಲ. ಇದರಿಂದಾಗಿ ನಮ್ಮ ಶಾಲಾ ಮಕ್ಕಳಿಗೆ ವಿದ್ಯಾಭ್ಯಾಸ ಸರಿಯಾಗಿ ಆಗುತ್ತಿಲ್ಲ. ಇನ್ನೊಂದು ವಿಚಾರ ಏನೆಂದರೆ ನನ್ನ ಕ್ಷೇತ್ರ ಆಂಧ್ರ ಪ್ರದೇಶಕ್ಕೆ ಹೊಂದಿಕೊಂಡಿರತಕ್ಕಂಥ ಪ್ರದೇಶ. ಇಲ್ಲಿ ಕೆಲವು ಶಾಲೆಗಳಿವೆ. ಆಂಧ್ರ ಪ್ರದೇಶಕ್ಕೆ ತಗುಲಿಕೊಂಡಿರುವ ಬಾರ್ಡರ್ ಏರಿಯಾದಲ್ಲಿ ಇರುವ 13 ಶಾಲೆಗಳಲ್ಲ ತೆಲುಗು ಶಿಕ್ಷಕರಿಲ್ಲ. ಕನಿಷ್ಠ ಎರಡು ವರ್ಷದಿಂದ ನಾನು ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ತೆಲುಗು ಶಿಕ್ಷಕರನ್ನು ನಮಗೆ ಕೊಡಿ ಎಂದು ಹೇಳಿದ್ದೇವೆ. ಅವರನ್ನು ನಿಯೋಜನೆ ಮಾಡಿಕೊಳ್ಳುವುದಕ್ಕೆ ಅಥವಾ ಅವರನ್ನು ರಿಕ್ರೂಟ್ ಮಾಡುವುದಕ್ಕೆ ಯಾವುದೇ ವ್ಯವಸ್ಥೆಯಾಗಿಲ್ಲ. ಆದ್ದರಿಂದ ಸರ್ಕಾರ ತೆಲುಗು ಶಿಕ್ಷಕರನ್ನು ಕೂಡ ಕೊಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಪ್ರೊ।। ಬಿ.ಕೆ. ಚಂದ್ರಶೇಖರ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಶಿಕ್ಷಕರ ನೇಮಕಾತಿಯಲ್ಲಿ ಕೊಂಚಮಟ್ಟಿಗೆ ತಡವಾಗಿರುವುದು ಮತ್ತು ಕೊಂಚಮಟ್ಟಿಗೆ ಗೊಂದಲ ನಾನಾ ಕಾರಣಕ್ಕಾಗಿ ಆಗಿದೆ. ಕೆ.ಎ.ಟಿ. ಯಿಂದ ತಡೆಯಾಜ್ಞೆ ಬಂದಿರುವುದರಿಂದ ಇದೆಲ್ಲಾ ಆದವು. ನಿಜ, ಇಲ್ಲವೆಂದರೆ ಅದು ಆ ಪ್ರಮಾಣಕತೆ ಆಗುತ್ತದೆ. ವ್ಯವಸ್ಥೆಯಲ್ಲಿ ಸ್ವಲ್ಪ ಗೊಂದಲ ಮೂಡಿಬಂದಿದೆ. ಆದರೆ ಯಾವ್ಯಾವ ಶಾಲೆಗಳಲ್ಲಿ ಉದಾಹರಣೆಗೆ ಈಗ 52 ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳು, ಯಾವ್ಯಾವ ಸಬ್ಜೆಕ್ಟ್‌ಗಳಲ್ಲಿ ಎಷ್ಟಿವೆ ಎಂಬುದರ ಪಟ್ಟಿಯನ್ನು ನಾನು ತರಿಸಿಟ್ಟು ಕೊಂಡಿದ್ದೇನೆ. ಈಗ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಹೈಪವರ್ ಕಮಿಟಿ ಏನಿದೆ, ಅಲ್ಲಿ ಸ್ವಲ್ಪ ತಡವಾಗಿದೆ. ನಮ್ಮ ಇಲಾಖೆಯಿಂದ ಒಂದು ಪ್ರಸ್ತಾವನೆಯನ್ನು ಕೊಟ್ಟಿದ್ದರು. ಈ ಜಾಗಗಳಿಗೆ ನಿವೃತ್ತ ಶಿಕ್ಷಕರನ್ನು ಆದಷ್ಟು ಬೇಗ ನೇಮಿಸಿಕೊಳ್ಳಬೇಕೆಂದು ಪ್ರಸ್ತಾವನೆ ಇದೆ. ಬೇರೆ ದಾರಿ ಇಲ್ಲ. ಏಕೆಂದರೆ ತಡೆಯಾಜ್ಞೆ ಇರುವುದರಿಂದ ಇದರಲ್ಲಿ ಸ್ವಲ್ಪ ತಡವಾಗಿದೆ. ಇವತ್ತು ತಾನೇ ತಿಳಿದುಬಂದ ರೀತಿಯಲ್ಲಿ ಅದನ್ನು ಈಗ ಕ್ಲಿಯರ್ ಮಾಡುತ್ತಿದ್ದಾರೆ. ನಿವೃತ್ತ ಶಿಕ್ಷಕರನ್ನು ತಾತ್ಕಾಲಿಕವಾಗಿ ಆದಷ್ಟು ಶೀಘ್ರವಾಗಿ ನೇಮಿಸುವ ಕೆಲಸವನ್ನು ನಾನು ಮಾಡುತ್ತೇನೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ನಾನು ಕೊಡುತ್ತೇನೆ. ಮತ್ತೊಂದು ವಿಚಾರ ಏನೆಂದರೆ ಕಳೆದ ಸಾರಿ ಗೌರವಾನ್ವಿತ ಸದಸ್ಯರುಗಳು ಹಲವಾರು ಜನ ವರ್ಗಾವಣೆ ಬಗ್ಗೆ ಶಿಫಾರಸ್ಸುಗಳನ್ನು ಮಾಡಿದ್ದರು. ಈ ಸಾರಿ

ಕೂಡ ಶಾಸಕರುಗಳಿಂದ, ಸಂಸತ್ ಸದಸ್ಯರುಗಳಿಂದ ಹೀಗೆ ಬಂದಿದೆ. ಇದರಲ್ಲಿ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರುಗಳನ್ನು ನಗರ ಪ್ರದೇಶಗಳಿಗೆ ಕೆಲಸ ಮಾಡುತ್ತಿರುವ ಶಿಕ್ಷಕರುಗಳನ್ನು ನಗರಪ್ರದೇಶಗಳಿಗೆ ವರ್ಗಾವಣೆ ಮಾಡಬೇಕು ಎನ್ನುವ ಶಿಫಾರಸ್ಸು ನಮ್ಮ ನಿಮ್ಮಿಂದಲೇ ಬಂದಿದೆ. ಇವತ್ತು ದಯವಿಟ್ಟು ನಾವೆಲ್ಲರೂ ಇದನ್ನು ಗಮನದಲ್ಲಿಟ್ಟು ಕೊಂಡು ಅವಾಯ್ಡ್ ಮಾಡಿದರೆ ಅಲ್ಲಿ ಕೆಲಸ ಮಾಡುತ್ತಿರುವ ಜನ ಗ್ರಾಮಾಂತರ ಪ್ರದೇಶಗಳಲ್ಲಿ ಉಳಿದುಕೊಳ್ಳುವುದಕ್ಕೆ ಕೂಡ ಸಹಾಯವಾಗುತ್ತದೆ. ಯಾರೂ ಇದರ ಬಗ್ಗೆ ತಪ್ಪು ತಿಳಿದುಕೊಳ್ಳಬಾರದು. ಇರುವ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಇದರಿಂದ ಗಂಭೀರವಾದ ತೊಂದರೆ ಕೂಡ ಆಗಿದೆ. ಆದರೆ ಮಾನ್ಯ ಕೈಲಾಸನಾಥ ಪಾಟೀಲರು ಹೇಳಿದ ಹಾಗೆ ಈ ಕೆಲಸವನ್ನು ಆದಷ್ಟು ಬೇಗ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇವತ್ತು 15,500 ಪ್ರಾಥಮಿಕ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಹಾಗೆಯೇ ನಿಂತಿದೆ. ಇದು ಜನವರಿಯಲ್ಲೇ ಆಗಬೇಕಾಗಿತ್ತು. ಮಾನ್ಯ ಸಚಿವರು ಹೇಳಿದ ಹಾಗೆ ನೇಮಕಾತಿ ಏಕೆ ಆಗುತ್ತಿಲ್ಲ ಎಂದರೆ ಕೆ.ಎ.ಟಿ. ಯಿಂದ ತಡೆಯಾಜ್ಞೆ ಇರುವಂಥಾದ್ದು. ಅಲ್ಲಿ ಈಗಾಗಲೇ ವಾದವಿವಾದ ಮುಗಿದೆ. ಈಗ ಜಡ್ಜಮೆಂಟ್‌ಗೆ ರಿಸರ್ವ್ ಇಟ್ಟಿದ್ದಾರೆ. ಇದು ಮೂರು ತಿಂಗಳಾಯಿತು. ಈ 15,500 ಮಂದಿ ಶಿಕ್ಷಕರುಗಳನ್ನು ತೆಗೆದುಕೊಂಡು ಬಿಟ್ಟಿದ್ದರೆ ಇದೇನು ಕೊರತೆಯಿದೆಯಲ್ಲಾ, ಇದು ನೀಗುತ್ತಿತ್ತು. ದಯವಿಟ್ಟು ತಮ್ಮ ವಕೀಲರ ಮುಖಾಂತರ ಕೆ.ಎ.ಟಿ.ಗೆ ಏನಾದರೂ ವಿಶೇಷ ಅರ್ಜಿಯನ್ನು ಕೊಟ್ಟು ಈ ಪ್ರಕ್ರಿಯೆಯ ಸಮಸ್ಯೆ ಇದೆ, ಇದು ಸಾರ್ವಜನಿಕ ಮಹತ್ವ ಇದೆ, ಅದಕ್ಕೆ ದಯವಿಟ್ಟು ಬೇಗ ತೀರ್ಮಾನ ಕೊಡಿ ಎಂದು ಅವರನ್ನು ಕೇಳಬೇಕು. ತೀರ್ಮಾನ ಇದೇ ರೀತಿ ಇರಬೇಕು ಎಂದು ಅಲ್ಲ. ಅವರು ನ್ಯಾಯಯುತವಾದ ತೀರ್ಮಾನವನ್ನು ಕೊಡಲಿ. ಆದರೆ ತೀರ್ಮಾನ ಬೇಗ ಆಗಬೇಕು. ಇಲ್ಲದಿದ್ದರೆ 15,500 ಜನ ಆಯ್ಕೆಯಾದವರು ಪ್ರತಿಯೊಂದು ಜಿಲ್ಲೆಯಲ್ಲೂ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. 25ನೇ ತಾರೀಖು ಅವರು ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ರ್‍ಯಾಲಿ ಮಾಡುತ್ತಿದ್ದಾರೆ. ಹೀಗಾಗಿ ತಕ್ಷಣವೇ, ಕೆ.ಎ.ಟಿ. ಯಿಂದ ತಡೆಯಾಜ್ಞೆ ಏನಿದೆ ಇದನ್ನು ವೆಕೇಟ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅಂತಿಮ ತೀರ್ಮಾನ ಆಗುವ ರೀತಿಯಲ್ಲಿ ನಿಮ್ಮ ವಕೀಲರ ಮುಖಾಂತರ ಅಲ್ಲಿ ವಿನಂತಿ ಅರ್ಜಿಯನ್ನು ಕೊಡುವಂಥಾದ್ದು ಆಗಲಿ. ಅದು ಇದುವರೆಗೂ ಆಗಿಲ್ಲ. ಈ ರೀತಿ ಪ್ರಯತ್ನ ಮಾಡದಿದ್ದರೆ ಏನಾಗುತ್ತದೆ ಎಂದರೆ, ಈಗ ಸರ್ಕಾರದ ಹಣಕಾಸಿನ ಪರಿಸ್ಥಿತಿ ಕೂಡ ಶೋಚನೀಯವಾಗಿ ಇರುವುದರಿಂದ ಈಗ ನೇಮಕಾತಿ ಆದರೆ ಬಹುಶಃ ಅವರಿಗೆಲ್ಲಾ ಮತ್ತೆ ಪೇಮೆಂಟ್‌ನ್ನು ಕೊಡುವುದು ಪ್ರಾರಂಭವಾಗುತ್ತದೆ ಎನ್ನುವ ದೃಷ್ಟಿಯಿಂದ ಸರ್ಕಾರದ ಪೆಂಡಿಂಗ್ ಇಟ್ಟಿದ್ದಾರೆ ಎನ್ನುವಂಥ ಸಂಶಯ ಬರುತ್ತದೆ. ಆದ್ದರಿಂದ ತಾವು ಕೆ.ಎ.ಟಿ. ಯವರನ್ನು ವಿನಂತಿ ಮಾಡಿಕೊಳ್ಳಬೇಕು.

ಗೊಂದಲ

ಅಧ್ಯಕ್ಷರು : ಸಾಧ್ಯವಿಲ್ಲ. ಇನ್ನೂ ಪ್ರಶ್ನೆಗಳಿವೆ. ಬೇರೆ ಸದಸ್ಯರಿಗೆ ಅನ್ಯಾಯ ಮಾಡುವುದಕ್ಕೆ ನನಗೆ ಇಷ್ಟ ಇಲ್ಲ.

ಗೊಂದಲ

ಅಧ್ಯಕ್ಷರು : ನಾನು 12-15ಕ್ಕೆ ಮುಗಿಸುತ್ತೇನೆ. ಇನ್ನೂ 13 ಜನರ ಪ್ರಶ್ನೆಗಳಿವೆ. ನಾನು ಬೆಳಿಗ್ಗೆ ಮೊದಲೇ ಹೇಳಿದ್ದೆ...

ಗೊಂದಲ

ಅಧ್ಯಕ್ಷರು : ಈ ಪ್ರಶ್ನೆ ಚಿಂಚೋಳಿ ತಾಲ್ಲೂಕಿಗೆ ಮಾತ್ರ ಸಂಬಂಧಪಟ್ಟಿರುವುದು. ಅಲ್ಲಿ ಶಿಕ್ಷಕರ ಕೊರತೆ ಬಗ್ಗೆ ಅವರು ಕೇಳಿರುವುದು. ಕೈಲಾಸನಾಥ ಪಾಟೀಲರೇ, ನೀವು ಮಾತ್ರ ಕೇಳಿ. ದಯವಿಟ್ಟು ಕ್ಷಮಿಸಿ, ಬೇರೆಯವರಿಗೆ ಅವಕಾಶ ಇಲ್ಲ. 12.15 ಕ್ಕೆ ಪ್ರಶ್ನೋತ್ತರ ವೇಳೆಯನ್ನು ನಾನು ಮುಕ್ತಾಯ ಮಾಡುತ್ತೇನೆ.

ಗೊಂದಲ

ಅಧ್ಯಕ್ಷರು : ಇನ್ನೂ ಐವತ್ತು ಜನ ಕೇಳಿ, ನಾನು ಸುಮ್ಮನೆ ಇರುತ್ತೇನೆ. ಬೇರೆ ಸದಸ್ಯರದ್ದು 13 ಪ್ರಶ್ನೆಗಳಿವೆ. ಅವರಿಗೆ ನಾವು ನ್ಯಾಯ ದೊರಕಿಸಿಕೊಡುವುದು ಬೇಡವೇನು?

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇದು ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು ಅಲ್ಲ. ಇದು ಇಡೀ ರಾಜ್ಯದ ಪ್ರಶ್ನೆ.

ಗೊಂದಲ

ಅಧ್ಯಕ್ಷರು : ನಾಯಕರುಗಳು ಅವರಿಗೆ ಸ್ವಲ್ಪ ಹೇಳಿ. ನೀವುಗಳು ಸುಮ್ಮನೆ ಕುಳಿತುಕೊಂಡರೆ ಹೇಗೆ? ಅವರಿಗೆಲ್ಲಾ ಸ್ವಲ್ಪ ಹೇಳಿ. ಹೀಗೆ ಮಾಡಿದರೆ ಬೇರೆ ಸದಸ್ಯರ ಗತಿ ಏನಾಗಬೇಕು? ನಾಯಕರುಗಳೇ, ನಿಮ್ಮ ನಿಮ್ಮ ಸದಸ್ಯರುಗಳಿಗೆ ಸ್ವಲ್ಪ ಹೇಳಿ. ನಾನು ಪ್ರಶ್ನೋತ್ತರ ಕಾಲವನ್ನು 12-15ಕ್ಕೆ ಸರಿಯಾಗಿ ಮುಕ್ತಾಯ ಮಾಡುತ್ತೇನೆ. ನನ್ನದೇನೂ ಅಭ್ಯಂತರ ಇಲ್ಲ. ಯಾರು ಬೇಕಾದರೂ ಕೇಳಿ. ಬೇರೆ ಸದಸ್ಯರಿಗೆ ನ್ಯಾಯ ದೊರಕಿಸಿಕೊಡಬೇಕಾದದ್ದು ನನ್ನ ಕರ್ತವ್ಯ. ಕೈಲಾಸನಾಥ ಪಾಟೀಲರೇ, ನೀವು ಮಾತ್ರ ಕೇಳಿ. (ಅಧಿಕೃತ ವರದಿಗಾರರಿಗೆ) ನೋಡಿ, ಕೈಲಾಸನಾಥ ಪಾಟೀಲರು ಹೇಳಿದ್ದು ಮಾತ್ರ ಬರೆದುಕೊಳ್ಳಿ. ಬೇರೆ ಯಾರು ಏನು ಹೇಳಿದರೂ ಬರೆದುಕೊಳ್ಳಬೇಡಿ. ನಮ್ಮ ಕಷ್ಟವನ್ನು ನೀವು ಅರ್ಥಮಾಡಿಕೊಳ್ಳಬೇಕು. ಇಲ್ಲದಿದ್ದರೆ 12 ಜನರಿಗೆ ಪ್ರಶ್ನೆ ಕೇಳುವ ಅವಕಾಶ ಹೊರಟು ಹೋಗುತ್ತದೆ. ಅವರೂ ನಿಮ್ಮ ಸ್ನೇಹಿತರೇ ಅಲ್ಲವೆ? ನಿಮ್ಮ ಕೊಲೀಗ್ಸ್ ಅಲ್ಲವೆ?

ಗೊಂದಲ

ಅಧ್ಯಕ್ಷರು : ಸುಮ್ಮನೆ ನನಗೆ ಕೋಪ ಬರಿಸಬೇಡಿ. ಯಾವುದಕ್ಕೂ ಒಂದು ಲಿಮಿಟ್ ಇರಬೇಕು. ನಿಮ್ಮ ನಿಮ್ಮ ನಾಯಕರು ಸ್ವಲ್ಪ ಹೇಳಬೇಕು. ತಾವುಗಳು ಹೀಗೆ ಸುಮ್ಮನೆ ಕುಳಿತುಕೊಂಡರೆ ಹೇಗೆ? ಬೇರೆ 13 ಜನರ ಪ್ರಶ್ನೆಗಳು ಹೊರಟು ಹೋಗುತ್ತವೆ.

ಮಾನ್ಯ ಸದಸ್ಯರು : ಅಧ್ಯಕ್ಷರು ಕೋಪಗೊಂಡಿದ್ದಾರೆ.

ಅಧ್ಯಕ್ಷರು : ಕೋಪದ ಪ್ರಶ್ನೆ ಅಲ್ಲ. ಬೇರೆಯವರಿಗೂ ನ್ಯಾಯವನ್ನು ನಾನು ಒದಗಿಸಿಕೊಡಬೇಕು ತಾನೆ? 13 ಪ್ರಶ್ನೆಗಳು ಹೋದರೆ ಆ ಸದಸ್ಯರುಗಳು ನನಗೆ ಏನು ಹೇಳುತ್ತಾರೆ? ಇನ್ನೂ ನಾಲ್ಕು ಪ್ರಶ್ನೆ ಮುಗಿದಿಲ್ಲ. ನಮ್ಮ ಹತ್ತಿರ ಇರುವುದು ಇನ್ನು ಹದಿನೈದು ನಿಮಿಷ, ಅಷ್ಟೆ.

ಶ್ರೀ ಕೈಲಾಸನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ತೆಲುಗು ಮಾಧ್ಯಮ ಶಿಕ್ಷಕರ ಕೊರತೆ ಬಹಳ ಇದೆಯೆಂದು ನಾನು ಹೇಳಿದೆ. ಇದರ ಬಗ್ಗೆ ಮಂತ್ರಿಗಳು ಸ್ಪಷ್ಟನೆಯನ್ನು ಕೊಡಲಿಲ್ಲ. ಇನ್ನೊಂದು ವಿಚಾರ ಮಾನ್ಯ ಮಂತ್ರಿಗಳು ವರ್ಗಾವಣೆ ಬಹಳಷ್ಟು ಆಗಿದೆಯೆಂದು ಹೇಳಿದರು. ಶಾಸಕರೇ ವರ್ಗಾವಣೆಗೆ ಶಿಫಾರಸ್ಸು ಮಾಡುತ್ತಾರೆ ಎಂದು ಅವರು ಹೇಳಿದರು. ನನ್ನ ಕ್ಷೇತ್ರದಲ್ಲಿ ವರ್ಗಾವಣೆ ಬಹಳ ಆಗಿದೆ. ಆದರೆ ಒಂದೂ ಕೂಡ ನಾನು ವರ್ಗಾವಣೆ ಮಾಡಿ

ಎಂದು ಕೇಳಿರಲಿಲ್ಲ. ಎಲ್ಲ ಶಿಕ್ಷಕರು ಹೋಗಿ ಸಂಬಂಧಪಟ್ಟ ಕಚೇರಿಗಳಿಂದ ವರ್ಗಾವಣೆ ಪತ್ರವನ್ನು ತೆಗೆದುಕೊಂಡು ಬಂದಿದ್ದಾರೆ. ಯಾರು ವರ್ಗಾವಣೆ ಪತ್ರ ತರುತ್ತಾರೋ, ಅವರ ವರ್ಗಾವಣೆ ಮಾಡಬೇಡಿ, ಅನುಮತಿ ಕೊಡಬೇಡಿ ಎಂದು ನಾನು ಶಾಲಾ ಸಲಹಾಸಮಿತಿಗೆ ಮನವಿ ಮಾಡಿಕೊಂಡಿದ್ದರೂ ಕೂಡ, ಶಾಲಾ ಸಮಿತಿಯವರ ಆಜ್ಞೆಯನ್ನು ಉಲ್ಲಂಘನೆ ಮಾಡಿ ವರ್ಗಾವಣೆ ಮಾಡಿಸಿಕೊಂಡು ಹೋಗಿದ್ದಾರೆ.

12.00 ಪಿ.ಎಂ.

ಇಂತಹ ಅನೇಕ ಪ್ರಸಂಗಗಳು ನನ್ನ ಕ್ಷೇತ್ರದಲ್ಲಿ ನಡೆದಿವೆ. ಶಾಲಾ ಸುಧಾರಣಾ ಸಮಿತಿ ಏನು ಕೆಲಸ ಮಾಡಬೇಕೋ ಆ ಕೆಲಸ ಈಗ ಮಾಡುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಬೇಕಾದಂತಹ ತೆಲುಗು ಮಾಧ್ಯಮದ ಶಿಕ್ಷಕರ ಕೊರತೆ ಎರಡು ವರ್ಷಗಳಿಂದ ಹಾಗೆ ಉಳಿದಿದೆ. ಇದರ ಬಗ್ಗೆ ರಿಕ್ರೂಟ್‌ಮೆಂಟ್ ಸಹ ಮಾಡಿಲ್ಲ ಎನ್ನುವ ವಿಚಾರವನ್ನು ನಾನು ತಮ್ಮ ಗಮನಕ್ಕೆ ತಂದು ಸ್ಪಷ್ಟನೆ ಕೇಳುತ್ತಿದ್ದೇನೆ.

ಪ್ರೊ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ತೆಲುಗು ಶಿಕ್ಷಕರ ಬಗ್ಗೆ ಹೇಳಿದರು. ಆ ಪ್ರೌಢ ಶಾಲೆಯಲ್ಲಿ 52 ಹುದ್ದೆಗಳು ಖಾಲಿ ಇದ್ದು ಅದರಲ್ಲಿ ತೆಲುಗು ಪಂಡಿತರದ್ದು ಒಂದು ಹುದ್ದೆ, ತೆಲುಗು ಟೀಚರ್‌ದ್ದು ಒಂದು ಹುದ್ದೆ, ಒಟ್ಟು ಎರಡು ತೆಲುಗು ಟೀಚರ್ಸ್ ಹುದ್ದೆಗಳು ಇವೆ. ನಾನು ಮೊನ್ನೆ ಸಹ ಹೇಳಿದೆ. ಎಲ್ಲೆಲ್ಲಿ ನಿಯೋಜನೆ ಆದಾರದ ಮೇಲೆ ಮಾಡುವುದಕ್ಕೆ ಆಗುತ್ತದೆ ಅಲ್ಲಿ ತಕ್ಷಣ ನೇಮಿಸೋಣ ಈ ಹುದ್ದೆಗಳು ಖಾಲಿಯಾಗುವವರೆಗೂ ಅಂತ. ಇದು ಬಾರ್ಡರ್ ಏರಿಯಾದಲ್ಲಿ ಇರುವುದರಿಂದ ತೆಲುಗು ಶಿಕ್ಷಕರು ಬೇಕು ಎನ್ನುವುದು ಸಂಪೂರ್ಣ ಸರಿ ಅದು ಆ ಕೆಲಸವನ್ನು ನಿಯೋಜನೆ ಆಧಾರದ ಮೇಲೆ ಅಥವಾ ನಿವೃತ್ತಿ ಶಿಕ್ಷಕರನ್ನು ತಕ್ಷಣ ತೆಗೆದುಕೊಂಡು ಮಾಡಿ ಎಂದು ಹೇಳಿದ್ದೇನೆ. ಅಲ್ಲಿ ಸ್ವಲ್ಪ ಮಟ್ಟಿಗೆ ನಿಧಾನವಾಯಿತು. ಇವತ್ತು ಅಥವಾ ನಾಳೆ ಬೆಳಿಗ್ಗೆ ನಾನು ಹಣಕಾಸು ಇಲಾಖೆಯವರ ಮೀಟಿಂಗ್‌ಗೆ ಕರೆದಿದ್ದೇನೆ. ಇನ್ನೂ ಮೇಲೆ ಅವರು ನಿಧಾನ ಮಾಡಬಾರದು ಎನ್ನುವುದಕ್ಕೆ ನಾವು ಬೇರೆ ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ವಿರೋದಪಕ್ಷದ ನಾಯಕರು ಹೇಳಿದ ಹಾಗೆ ಕೆ.ಎ.ಟಿ.ದು ಎನೂ ಪ್ರಯತ್ನ ಆಗಿಲ್ಲ ಎಂದು ಹೇಳಿದರು. ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಡ್ವೊಕೇಟ್ ಜನರಲ್ ಅವರನ್ನೂ 2-3 ಬಾರಿ ನಾವು ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ಸರ್ಕಾರದ ವತಿಯಿಂದ ದಯವಿಟ್ಟು ಅದಷ್ಟು ಬೇಗ ಇದನ್ನು ಮಾಡಬೇಕು, ಏಕೆಂದರೆ ಆ ಶಿಕ್ಷಕರು ಬಂದರೆ ಸುಮಾರು 70-80 ಪರ್ಸೆಂಟ್ ತೊಂದರೆ ಇರುವುದಿಲ್ಲ, ಅವರು ಹೇಳಿದ್ದು ಸರಿ. ಕ್ವಿಕ್ ಡಿಸೀಷನ್‌ಗೆ ನಾವು ಅಫೀಲ್ ಮಾಡಿಕೊಂಡು, ಅರ್ಜಿ ಹಾಕಿಕೊಂಡಿದ್ದು ಆಗಿದೆ. ಅದು ಅಲ್ಲದೇ ಒರಲ್ ಆಗಿ ಸಬ್‌ಮಿಷನ್ ಮಾಡಿದ್ದೇವೆ, ವಕೀಲದ ಮೂಲಕ. ಅದರ ಸಿಕ್‌ವೆನ್ಸ್‌ನ್ನು ಇದೇ ಸದನದಲ್ಲಿ ಕಳೆದ ವಾರ ನಾನು ಉತ್ತರ ಕೊಡುವಾಗ ಹೇಳಿದೆ, ಬಹುಶಃ ತಾವು ಇರಲಿಲ್ಲವೆಂದು ಕಾಣುತ್ತದೆ. ಯಾವ ಯಾವ ಡೇಟ್‌ನಲ್ಲಿ ಸರ್ಕಾರದ ಕಡೆಯಿಂದ ಏನೇನು ಆಗಿದೆ ಅಂತ ಹೇಳಿದೆ. ನಾವು ಹಾಗೆಯೇ ಕುಳಿತುಕೊಂಡು ಆಸಡ್ಡೆಯಿಂದ ಇರುವುದಕ್ಕೆ ಸಾಧ್ಯವಿಲ್ಲ. ಇದು ಅವರ್ಯಾರೋ ಸತ್ಯಾಗ್ರಹ ಮಾಡುವ ಪ್ರಶ್ನೆ ಅಲ್ಲ. ಮಕ್ಕಳಿಗೆ ಶಿಕ್ಷಕರು ಬೇಕಲ್ಲಾ, ಆ ದೃಷ್ಟಿಯಲ್ಲಿ ನಾವು ಬಹಳ ಪ್ರಮುಖವಾಗಿ ನೋಡಬೇಕಾಗುತ್ತದೆ. ಆ ಕೆಲಸವನ್ನು ನಾವು ಖಂಡಿತವಾಗಿ ಮಾಡುತ್ತೇವೆ. ನಾನು ತಮ್ಮಲ್ಲಿ ಬಿನ್ನಹ ಮಾಡಿಕೊಳ್ಳುತ್ತೇನೆ. ಇದರಲ್ಲಿ ಸ್ವಲ್ಪವೂ ಲೋಪದೋಷವಾಗದ ರೀತಿಯಲ್ಲಿ ನಾನಂತೂ ಕೆಲಸ ಮಾಡುತ್ತೇನೆ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು : ಈ ಪ್ರಶ್ನೆ ಇರುವುದು ಚಿಂಚೋಳಿ ತಾಲ್ಲೂಕು ಬಗ್ಗೆ. ಇದು ಜನರಲ್ ಕ್ವೊಶ್ಚನ್ ಅಲ್ಲ. ಶ್ರೀ ಕಟ್ಟಿಮನಿಯವರು ತಾವು ಪ್ರಶ್ನೆ ಕೇಳಿ. ಸದಸ್ಯರು ಗೈರುಹಾಜರಿದ್ದಾರೆ. ಮುಂದಿನ ಪ್ರಶ್ನೆ ಕಡೋಲ್ಕರ್ ತಾವು ಕೇಳಿ.

ಗೊಂದಲ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮಠಾಠಿ ಭಾಷೆಯ ಪ್ರಶ್ನೆ ಪತ್ರಿಕೆಗಳ ಮುದ್ರಣದಲ್ಲಿ ತಪ್ಪುಗಳು ಆಗಿರುವ ಬಗ್ಗೆ

171 (1576) ಶ್ರೀ ಮನೋಹರ ಪೊನ್ನಪ್ಪ ಕಾಡೊಲ್ಕರ್ (ಉಚ್ಚಗಾಂವ) - ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಎಸ್ ಎಸ್ ಎಲ್ ಸಿ ಪರೀಕ್ಷೆಯ ಮರಾಠಿ ಭಾಷೆಯ ಪ್ರಶ್ನೆ ಪತ್ರಿಕೆಯ ಮುದ್ರಣದಲ್ಲಿ ತಪ್ಪುಗಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಮುದ್ರಣದ ತಪ್ಪಿನಿಂದಾಗಿ ಮುಗ್ಧ ವಿದ್ಯಾರ್ಥಿಗಳ ಮರಣ ಹೊಂದಿದ್ದು ಈ ರೀತಿಯ ತಪ್ಪುಗಳನ್ನು ತಪ್ಪಿಸಲು ತೆಗೆದುಕೊಂಡ ಕ್ರಮಗಳೇನು?

3. ತಪ್ಪುಗಳನ್ನು ನಿವಾರಿಸುವ ದೃಷ್ಟಿಯಿಂದ ಎಸ್ ಎಸ್ ಎಲ್ ಸಿ ಪರೀಕ್ಷಾ ವಿಧಾನದಲ್ಲಿ ವಿಕೇಂದ್ರಿಕರಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಪ್ರೊ।। ಬಿ.ಕೆ. ಚಂದ್ರಶೇಖರ್ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು :

1. ಮಾರ್ಚ್ 2002 ರ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಮರಾಠಿ ಮಾಧ್ಯಮದ ಗಣಿತ ಪ್ರಶ್ನೆ ಪತ್ರಿಕೆಗಳಲ್ಲಿ ತಪ್ಪಾಗಿದ್ದು ಇದರಿಂದಾಗಿ ವಿದ್ಯಾರ್ಥಿಗಳಿಗೆ ಅನಾನುಕೂಲ ಉಂಟಾಗಿರುತ್ತದೆ.

ಈ ಬಗೆಗೆ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಅನ್ವಯಿಸುವಂತೆ ಮೂಲ ಪ್ರಶ್ನೆ ಪತ್ರಿಕೆಗಳು ಕನ್ನಡ ಹಾಗೂ ಆಂಗ್ಲ ಭಾಷೆಗಳಲ್ಲಿ ಗೌಪ್ಯವಾಗಿ ತಯಾರಿಸಲ್ಪಡುತ್ತವೆ. ಉಳಿದ ಮಾಧ್ಯಮಗಳಲ್ಲಿ ಭಾಷಾಂತರವನ್ನು ಕರ್ನಾಟಕದಲ್ಲಿಯೇ ಮಾಡಿಸಲಾಗುತ್ತಿತ್ತು. ಇದನ್ನು ಬದಲಾಯಿಸಿ ಮುದ್ರಕರ ಹಂತದಲ್ಲಿಯೇ ಭಾಷಾಂತರವನ್ನು ಪ್ರಾಯೋಗಿಕವಾಗಿ 2001 ರ ಪರೀಕ್ಷೆಗೆ ಮಾಡಿಸಲಾಗಿತ್ತು. ಅಂತಹ ಸಂದರ್ಭದಲ್ಲಿ ಭಾಷಾಂತರದ ಬಗೆಗೆ ಯಾವ ದೋಷವು : ಆಕ್ಷೇಪಣೆಗಳು ಬಂದಿರುವುದಿಲ್ಲ. ಮರಾಠಿ ಭಾಷೆಯು ಮಹಾರಾಷ್ಟ್ರದ ಭಾಷೆಯಾಗಿರುವುದರಿಂದ ಮರಾಠಿ ಪ್ರಶ್ನೆ ಪತ್ರಿಕೆಯ ಭಾಷಾಂತರವನ್ನು ಪ್ರಶ್ನೆ ಪತ್ರಿಕೆಗಳ ಗೌಪ್ಯತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಮುದ್ರಕರ ಹಂತದಲ್ಲಿಯೇ ಮರಾಠಿ ಭಾಷೆಯ ಪರಿಣತರಿಂದ ಮಾಡಿಸಲಾಗಿರುತ್ತದೆ. ಆದುದರಿಂದ ಮಾರ್ಚ್ 2002 ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿಯೆ ಸಹ ಮರಾಠಿ ಮಾಧ್ಯಮದ ಗಣಿತ ಪ್ರಶ್ನೆ ಪತ್ರಿಕೆಯನ್ನು ಮುದ್ರಕರ ಹಂತದಲ್ಲಿ ಮಾಡಿಸಲಾಗಿದೆ.

ಪ್ರಸ್ತುತ ವರ್ಷ ಅಂದರೆ 2002 ರ ವರ್ಷದ ಎಸ್ ಎಸ್ ಎಲ್ ಸಿ ಪರೀಕ್ಷೆಯ ಮರಾಠಿ ಮಾಧ್ಯಮದ ಗಣಿತ ವಿಷಯದ ಪ್ರಶ್ನೆ ಪತ್ರಿಕೆಯಲ್ಲಿ (ಭಾಷಾಂತರಿಸುವಲ್ಲಿ) ತಪ್ಪು : ದೋಷಗಳು ಉಂಟಾಗಿರುತ್ತವೆ.